(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಬೆಳಿಗ್ಗೆ 11 ಗಂಟೆಯೊಳಗೆ ಸದನವನ್ನು ಕರೆಯಬೇಡಿ. ಏಕೆಂದರೆ ಯಾರೂ ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಅಷ್ಟು ಬೆಳಿಗ್ಗೆ ಯಾರೂ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಹಾಗಲ್ಲ ಸ್ವಾಮಿ. Question hourನಲ್ಲಿ ಯಾರ್ಯಾರು ಪ್ರಶ್ನೆ ಕೇಳಿದ್ದಾರೆ ಅವರು ಬರುತ್ತಾರೆ. ಬರದಿದ್ದರೆ lapse ಆಗುತ್ತದೆಂದು ಬರುವುದರಿಂದ ಬೇಗೆ ಆರಂಭವಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ ಇವತ್ತು 8 ಗಂಟೆಯ ತನಕ ಸದನ ನಡೆಸಿ. ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ನಾಳೆ 7 ಗಂಟೆಯೊಳಗೆ ಚರ್ಚೆ ಮತ್ತು ಉತ್ತರ ಮುಗಿಯಬೇಕು. ಮಧ್ಯೆ ಹಾಗೆ ಹೀಗೆ ಎಂದು ಗಲಾಟೆ ಮಾಡಿದರೆ ಅದು ಚೆನ್ನಾಗಿರುವುದಿಲ್ಲ. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 7 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ : 5-7-2006ನೇ ಬುಧವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು.)

ಅನುಬಂಧ - I

670(962) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಪೋಲೀಸ್ ಠಾಣೆಗಳಿವೆ? (ವಿವರವಾದ ಮಾಹಿತಿಯನ್ನು ಒದಗಿಸುವುದು)

ಆ) ಕುಂದಗೋಳ ತಾಲ್ಲೂಕಿನಲ್ಲಿ ಗುಡಿಗೇರಿಯಲ್ಲಿ ಹೊಸದಾಗಿ ಪೋಲೀಸ್ ಠಾಣೆಯನ್ನು ತೆರೆಯಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ, ಅದು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 8 ಪೋಲೀಸ್ ಠಾಣೆ ಮತ್ತು 5 ಹೊರಠಾಣೆ ಇರುತ್ತವೆ. ಠಾಣೆಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಪೊಲೀಸ್ ಠಾಣೆ	ಹೊರಠಾಣೆ
1	ಧಾರವಾಡ ಗ್ರಾಮೀಣ	ಹೆಬ್ಬಳ್ಳಿ
2	ಗರಗ	–
3	ಅಳ್ನಾವರ	–
4	ನವಲಗುಂದ	ಮೊರಬ
5	ಅಣ್ಣಿಗೇರಿ	–
6	ಹುಬ್ಬಳ್ಳಿ ಗ್ರಾಮೀಣ	ಬಂಡಿವಾಡ
7	ಕುಂದಗೋಳ	ಗುಡಿಗೇರಿ
8	ಕಲಘಟಗಿ	ಮಿಶ್ರಿಕೋಟಿ

ಆ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

671(963) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋ ಎಷ್ಟು;

ಆ) ಕುಂದಗೋಳ ತಾಲ್ಲೂಕಿಗೆ 1 ಹೊಸ ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋವನ್ನು ಮಂಜೂರು ಮಾಡಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಯಾವಾಗ ಬಸ್ಸು ಡಿಪೋ ಮಂಜೂರು ಮಾಡಿ ಪ್ರಾರಂಭಿಸಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) 5.

ಆ) ಇಲ್ಲ.

ಇ) ಕುಂದಗೋಳದಲ್ಲಿ ಹೊಸ ಘಟಕ ನಿರ್ಮಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

672(1339) ಶ್ರೀ ಅಂಗಾರ ಎಸ್. (ಸುಳ್ಯ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪವಿತ್ರ ಪುಣ್ಯ ಕ್ಷೇತ್ರವಾದ ಕುಕ್ಕೇ ಶ್ರೀ ಸುಬ್ರಮಣ್ಯ ದೇವಾಯಕ್ಕೆ ಬರುವ ಗುಂಡ್ಯ–ಸುಬ್ರಹ್ಮಣ್ಯ ರಸ್ತೆಯು ತೀರಾ ಹದಗೆಟ್ಟು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಸ್ತೆ ದುರಸ್ತಿಗೆ ತೆಗೆದುಕೊಂಡಿರುವ ಕ್ರಮಗಳೇನು;